## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ನಂಬ್ರ: 2818-2019**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು --- ಪಿರ್ಯಾದಿದಾರರು

-ಮತ್ತು-

1. ಜಯಕರ, 33 ವರ್ಷ,
ತಂದೆ: ಡಿ. ಬಾಬು,
ವಾಸ: ಮೆಟ್ಟಿನ ಮನೆ,
ಸೌಕೂರು ಬೆಟ್ಟ,
ಗುಲ್ವಾಡಿ ಗ್ರಾಮ,
ಕುಂದಾಪುರ ತಾಲೂಕು.

2. ರಾಜೇಶ್, 42 ವರ್ಷ,
ತಂದೆ: ಡಿ. ಬಾಬು,
ವಾಸ: ಮಾತೃಶ್ರೀ ಸದನ,
ಉದಯ ನಗರ,
ಗುಲ್ವಾಡಿ ಗ್ರಾಮ,
ಕುಂದಾಪುರ ತಾಲೂಕು.

3. ಮಾದೇವಿ, 39 ವರ್ಷ,
ಗಂಡ: ರಾಜೇಶ್,
ವಾಸ: ಮಾತೃಶ್ರೀ ಸದನ,
ಉದಯ ನಗರ,
ಗುಲ್ವಾಡಿ ಗ್ರಾಮ,
ಕುಂದಾಪುರ ತಾಲೂಕು.

4. ಮಹೇಶ್, 45 ವರ್ಷ,
ತಂದೆ: ವಿಠಲ,
ವಾಸ: ಮಾವಿನಕಟ್ಟೆ,
ಗುಲ್ವಾಡಿ ಗ್ರಾಮ,
ಕುಂದಾಪುರ ತಾಲೂಕು. --- ಆರೋಪಿತರು

**:ದೋಷಾರೋಪಣೆ:**

ಶ್ರೀಮತಿ ನಾಗರತ್ನಮ್ಮ ಬಿ.ಎ.ಎಲ್., ಎಲ್ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ:

1 ನೇ ಆಪಾದಿತರಾದ ನೀವು ಸಾಕ್ಷಿ 1 ನೇಯವರನ್ನು ಹಿಂದೂ ಧಾರ್ಮಿಕ ಜಾತಿ ಪದ್ದತಿಯಂತೆ ಗುರುಹಿರಿಯರ ಸಮಕ್ಷಮದಲ್ಲಿ ದಿನಾಂಕ 30.04.2017 ರಂದು ಕ್ಲಾಸಿಕ್ ಆಡಿಟೋರಿಯಮ್ ಹಾಲ್ ತ್ರಾಸಿಯಲ್ಲಿ ಮದುವೆಯಾಗಿದ್ದು, ಮದುವೆ ಪೂರ್ವದಲ್ಲಿ ಸಾಕ್ಷಿ 1 ನೇಯವರ ಮನೆಯಲ್ಲಿ ಸಾಕ್ಷಿ 2 ರಿಂದ 4 ನೇ ಯವರ ಸಮಕ್ಷಮದಲ್ಲಿ ಮದುವೆ ಮಾತುಕತೆ ನಡೆದಿದ್ದು, ಮದುವೆ ಮಾತುಕತೆ ಮುಗಿದ ಬಳಿಕ 1 ರಿಂದ 4 ನೇ ಆಪಾದಿತರಾದ ನೀವುಗಳು ವರದಕ್ಷಿಣೆಯಾಗಿ ರೂ. 2 ಲಕ್ಷ ನಗದು ಹಣವನ್ನು ಹಾಗೂ 20 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ನೀಡುವಂತೆ ಬೇಡಿಕೆ ಇಟ್ಟಿದ್ದು, ಸಾಕ್ಷಿ 2 ರಿಂದ 4 ನೇಯವರು ಇದಕ್ಕೆ ಒಪ್ಪದೇ ಇದ್ದು ಮದುವೆ ಸಂಬಂಧವನ್ನು ಕೈ ಬಿಡಲು ಮುಂದಾದಾಗ, ಆಪಾದಿತರಾದ ನಿಮ್ಮ ಒತ್ತಾಯಕ್ಕೆ ಮಣಿದ ಸಾಕ್ಷಿ 2 ರಿಂದ 4 ನೇಯವರು ವರದಕ್ಷಿಣೆಯಾಗಿ 1 ಲಕ್ಷ ರೂ. ನಗದು ಹಾಗೂ 9 ಪವನ್ ಚಿನ್ನವನ್ನು ಹಾಕಲು ಒಪ್ಪಿಕೊಂಡಿದ್ದು, ವರದಕ್ಷಿಣೆಯ ಹಣವನ್ನು ಆಪಾದಿತರಾದ ನೀವು ಮದುವೆಯ ಮುಂಚಿತವಾಗಿ ಸಾಕ್ಷಿ 1 ನೇಯವರ ಮನೆಗೆ

ಬಂದು ಪಡೆದುಕೊಂಡು ಹೋಗಿದ್ದು, ಮದುವೆಯ ದಿನ ಸಾಕ್ಷಿ 1 ನೇಯವರಿಗೆ ಆಪಾದಿತರಾದ ನಿಮ್ಮ ಬೇಡಿಕೆಯಂತೆ ಚಿನ್ನವನ್ನು ಹಾಕಿದ್ದು, ಮದುವೆಯ ಬಳಿಕ ಸಾಕ್ಷಿ 1 ನೇಯವರು ಗುಲ್ವಾಡಿ ಉದಯನಗರದಲ್ಲಿರುವ 2 ನೇ ಆಪಾದಿತರಾದ ನಿಮ್ಮ ಮನೆಯಲ್ಲಿ ಮೂರು ತಿಂಗಳು ವೈವಾಹಿಕ ಜೀವನ ನಡೆಸಿಕೊಂಡಿರುವ ಸಮಯದಲ್ಲಿ 1 ನೇ ಆರೋಪಿತರಾದ ನೀವು ಇನ್ನಿತರ ಆರೋಪಿತರ ಪ್ರೇರಣೆಯ ಮೇರೆಗೆ ಸಾಕ್ಷಿ 1 ನೇಯವರಿಗೆ ವರದಕ್ಷಿಣೆ ಹಣ ತಂದಿರುವುದು ಕಡಿಮೆಯಾಯಿತೆಂದು ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿದ್ದು ನಂತರ ಬೆಳಗಾವಿಯ ಗೋಖಾಕ್ ನ ಘಟಪ್ರಭಾದಲ್ಲಿರುವ ಬಾಡಿಗೆ ಮನೆಗೆ ಕರೆದುಕೊಂಡು ಹೋಗಿ ವೈವಾಹಿಕ ಜೀವನ ನಡೆಸುವ ಸಮಯದಲ್ಲಿ ಅಲ್ಲಿ ಕೂಡಾ 1 ನೇ ಆಪಾದಿತರಾದ ನೀವು ಸಾಕ್ಷಿ 1 ನೇಯವರಿಗೆ ವರದಕ್ಷಿಣೆ ಹಣ ತಂದಿರುವುದು ಕಮ್ಮಿಯಾಯಿತೆಂದು ಮಾನಸಿಕ ಹಿಂಸೆ ನೀಡಿರುತ್ತೀರೆಂದೂ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 1 ನೇ ಆಪಾದಿತರಾದ ನೀವು ಸಾಕ್ಷಿ 1 ನೇಯವರನ್ನು ಪುನಃ ಗುಲ್ವಾಡಿಯ ಉದಯನಗರದಲ್ಲಿರುವ 2 ನೇ ಆಪಾದಿತರಾದ ನಿಮ್ಮ ಮನೆಗೆ ಕರೆದುಕೊಂಡು ಬಂದು ಸಾಕ್ಷಿ 1 ನೇಯವರನ್ನುದ್ದೇಶಿಸಿ ಹೆಚ್ಚಿನ ಹಣವನ್ನು ತರುವಂತೆ ಪೀಡಿಸಿ "ರಂಡೆ ಬೇವರ್ಸಿ" ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನಗೊಳಿಸಿ ಬೇರೆ ಅಪರಾಧ ಮಾಡುವಂತೆ ಪ್ರಚೋದಿಸಿರುವಿರೆಂದೂ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 1 ನೇ ಆಪಾದಿತರಾದ ನೀವು "ಹಣ ತಾರದೇ ಇದ್ದಲ್ಲಿ ಕೊಲ್ಲುವುದಾಗಿ" ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 1 ನೇ ಆಪಾದಿತರಾದ ನೀವು ಮಾವಿನಕಟ್ಟೆ ಸರ್ಕಲ್ ನ ಸಾರ್ವಜನಿಕ ಸ್ಥಳದಲ್ಲಿ ಸಾಕ್ಷಿ 1 ನೇಯವರಿಗೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುವಿರೆಂದೂ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 2 ರಿಂದ 4 ನೇ ಆಪಾದಿತರಾದ ನೀವುಗಳು 1 ನೇ ಆಪಾದಿತರಿಗೆ ಮೇಲ್ಕಂಡ ಕೃತ್ಯವನ್ನು ಎಸಗಲು ಪ್ರೇರಣೆ ನೀಡಿರುವಿರೆಂದೂ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 109 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

5. 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 1 ನೇ ಆಪಾದಿತರಾದ ನೀವು ಮದುವೆಯ ಸಮಯದಲ್ಲಿ ಸಾಕ್ಷಿ 1 ನೇಯವರ ಮನೆಯಿಂದ ಪಡೆದ ವರದಕ್ಷಿಣೆ ಹಣವನ್ನು ಸಾಕ್ಷಿ 1 ನೇಯವರಿಗೆ ವ್ಯಯ ಮಾಡದೆ, ಹೆಚ್ಚಿನ ವರದಕ್ಷಿಯಾಗಿ ಹಣವನ್ನು ತರುವಂತೆ ಬೇಡಿಕೆ ಇಟ್ಟಿರುತ್ತಿರೆಂದೂ, ಆ ಮೂಲಕ ನೀವು ಕಲಂ 3 ಮತ್ತು 4 ರ ವರದಕ್ಷಿಣೆ ನಿಷೇಧ ಕಾಯ್ದೆ ಯಂತೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 04.08.2021

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

RMS